DITTO WS

Reg. No. : ......................................

Name : ..........................................

**FY-16**

# FIRST YEAR HIGHER SECONDARY EXAMINATION, MARCH 2020

Part – III

**KANNADA (Optional)**

Maximum : 80 Scores

Time : 2 ½ Hours

Cool-off time : 15 Minutes

***General Instructions to Candidates :***

- There is a 'Cool-off time' of 15 minutes in addition to the writing time.
- Use the 'Cool-off time' to get familiar with questions and to plan your answers.
- Read questions carefully before answering.
- Read the instructions carefully.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಪರೀಕ್ಷೆ ಬರೆಯಲು ಬೇಕಾದ ಸಮಯಕ್ಕೆ ಹೊರತಾಗಿ **15** ನಿಮಿಷಗಳ 'ಕೂಲ್ ಆಫ್ ಸಮಯ' ವನ್ನು ನೀಡಲಾಗಿದೆ.
- 'ಕೂಲ್ ಆಫ್ ಸಮಯ' ವನ್ನು ಪ್ರಶ್ನೆಗಳಿಗೆ ಸಂಬಂಧಿಸಿದ ನಿಮ್ಮ ಉತ್ತರಗಳನ್ನು ಸಿದ್ಧಪಡಿಸಲು ಬಳಸಿರಿ.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ)** **(4 × 1 = 4)**

1. 'ಮೊದಲಗಿತ್ತಿಯಂತೆ ಮೆರೆಯುವಿಯೇ ತಾಯಿ !' ಎಂದ ಕವಿ ಯಾರು ?
   (ಕೆ.ಎಸ್. ನರಸಿಂಹಸ್ವಾಮಿ, ಅಂಬಿಕಾತನಯದತ್ತ, ಗೋವಿಂದ ಪೈ, ಸು.ರಂ. ಎಕ್ಕುಂಡಿ)

2. 'ಕರ್ನಾಟಕ ಸಂಗೀತದ ಪಿತಾಮಹ' ಎಂದು ಪ್ರಸಿದ್ಧರಾದವರು ಯಾರು ?
   (ಪುರಂದರದಾಸ, ಕನಕದಾಸ, ಬಸವಣ್ಣ, ಹೆಳವನಕಟ್ಟೆ ಗಿರಿಯಮ್ಮ)

3. 'ಶ್ರೀನಿವಾಸ' ಇದು ಯಾರ ಕಾವ್ಯನಾಮವಾಗಿದೆ ?
   (ಅ.ರಾ. ಮಿತ್ರ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪು.ತಿ.ನ., ಶ್ರೀನಿವಾಸ ವೈದ್ಯ)

4. ಉಪಲಬ್ಧವಿರುವ ಕನ್ನಡದ ಮೊದಲ ಗದ್ಯ ಗ್ರಂಥ ಯಾವುದು ?
   (ಶಿಲಪ್ಪದಿಗಾರಮ್, ಕವಿರಾಜಮಾರ್ಗ, ವಡ್ಡಾರಾಧನೆ, ಕುಮಾರವ್ಯಾಸ ಭಾರತ)

DITTO WS

**(5 ರಿಂದ 8 ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ)** **(4 × 1 = 4)**

5. ಬೈಬ್ಯಾಡ, ಭೇದಿಲ್ಲ – ಈ ಪದಗಳ ಶಿಷ್ಟರೂಪವನ್ನು ಬರೆಯಿರಿ.

6. ತಲೆದೂಗು – ಈ ಪದವನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿರಿ.

7. ಶಿಕ್ಷಣ, ಉನ್ನತ – ಈ ಪದಗಳ ಭಾವನಾಮ ರೂಪವನ್ನು ಬರೆಯಿರಿ.

8. ಅನ್ವರ್ಥನಾಮಕ್ಕೆ ಒಂದು ಉದಾಹರಣೆಯನ್ನು ನೀಡಿರಿ.

9. ಸರಿ ಹೊಂದಿಸಿ ಬರೆಯಿರಿ. **(4)**

| | |
|---|---|
| ಎಸ್.ವಿ. ಪರಮೇಶ್ವರ ಭಟ್ಟ | ಚಂದನದ ಕಂಪು |
| ಬಸವಣ್ಣ | ಅಳಿಮನದವನ ಭಕ್ತಿ |
| ಅಕ್ಕಮಹಾದೇವಿ | ದಯೆಯೇ ಧರ್ಮದ ಮೂಲವಯ್ಯ |
| ಜೇಡರ ದಾಸಿಮಯ್ಯ | ಕಲಿಸು ಜೀವನ ಕಲೆಯ |

**(10 ರಿಂದ 12 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ)** **(2 × 3 = 6)**

10. ಕೆಳಗೆ ನೀಡಲಾದ ಸಂಯುಕ್ತ ವಾಕ್ಯವನ್ನು ಮೂರು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

ಕಾಸರಗೋಡಿನಲ್ಲಿ ಜನಿಸಿದ ಸಾರಾ ಅಬೂಬಕ್ಕರ್ ಅವರು ಕನ್ನಡ ಕಾದಂಬರಿ ಬರಹಗಾರರಾಗಿ ಮುಸ್ಲಿಂ ಸಂವೇದನೆಯ ಲೇಖಕಿಯಾಗಿ ಪ್ರಸಿದ್ಧರಾದವರು.

11. ಕೆಳಗೆ ನೀಡಲಾದ ಗದ್ಯಭಾಗದಲ್ಲಿರುವ ಅಕ್ಷರ ತಪ್ಪುಗಳನ್ನು ಸರಿಪಡಿಸಿ ಪುನಃ ಬರೆಯಿರಿ.

ಭಾಸೆಯು ನದಿಯ ಪ್ರವಾಹದಂತೆ ನಿರಂತರ ಹರಿಯುತ್ತ ಏರಿಲಿತಗಲಿಗೆ ಒಳಗಾಗಿ ಕಾಲ ದೇಸಗಳ ವ್ಯತ್ಯಾಸದಿಂದ ರೂಪ ಒದಲಾಯಿಸುವ ಸಾಗುತ್ತದೆ. ಭಾಸೆಯಲ್ಲಿ ಹಾಗೆ ತಳೆದೋರುವ ವ್ಯತ್ಯಾಸಗಲನ್ನು ಭಾಷಿಕ ವ್ಯತ್ಯಾಸಗಳು ಎಂದು ಕರೆಯುತ್ತಾರೆ.

12. ಕೆಳಗೆ ನೀಡಲಾದ ತ್ರಿಪದಿಯ ಸ್ವಾರಸ್ಯವನ್ನು ಬರೆಯಿರಿ.

ಹಲಗೆಯ ಹಿಡಿದಿಲ್ಲ ಬಳಪದಿ ಬರೆದಿಲ್ಲ
ಶ್ರೀ ಗುರುವು ನಮಗ ಬರೆಸಿಲ್ಲ ಕೇಳಿರವ್ವ
ಲೆಕ್ಕಣಿಗೆ ನಮಗ ಗೊತ್ತಿಲ್ಲ

**(13 ರಿಂದ 17 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಅರ್ಧಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ)** **(4 × 4 = 16)**

13. 'ಕಿಲುಬಿಡಿದ ಕನ್ನಡಿಗೆ ಹುಳಿಹಿಡಿಸೆ ಹೊಳೆವಂತೆ' – ಈ ಮಾತಿನ ಸಂದರ್ಭವನ್ನು ಸೂಚಿಸಿ ವಿವರಿಸಿರಿ.

14. ಯಕ್ಷಗಾನ ತಾಳಮದ್ದಲೆಯ ಸಾಮಾನ್ಯ ಸ್ವರೂಪವನ್ನು ಚುಟುಕಾಗಿ ವಿವರಿಸಿರಿ.

15. 'ಪತ್ರಕರ್ತರು ಪತ್ರಿಕೆಯ ಜೀವನಾಡಿ' – ಈ ಮಾತನ್ನು ಸಮರ್ಥಿಸಿಕೊಂಡು ಟಿಪ್ಪಣಿಯನ್ನು ತಯಾರಿಸಿರಿ.

16. 'ಬೆಳ್ಳಗಿರುವುದೆಲ್ಲಾ ಹಾಲಲ್ಲ' – ಎಂಬ ಗಾದೆ ಮಾತನ್ನು 'ಅಶ್ವತ್ಥಾಮ' ಕವನ ಹೇಗೆ ಸಮರ್ಥಿಸುತ್ತದೆ ? ಬರೆಯಿರಿ.

17. ಕೆಳಗೆ ನೀಡಲಾದ ಗ್ರಾಮ್ಯಭಾಷೆಯ ಗದ್ಯಭಾಗವನ್ನು ಶಿಷ್ಟರೂಪಕ್ಕೆ ಬದಲಾಯಿಸಿ ಬರೆಯಿರಿ.

    ಟ್ರಕ್ಕ ಮ್ಯಾಗಿಂದ ಜಿಗಿದವರ ಇಬ್ಬರೂ ಓಡಿಕೊಂತ ಓಡಿಕೊಂತ ಗೌಡರ ಓಣ್ಯಾಗ ಹಾದು, ದೇಸಾಯರ ವಾಡೇ ದಾಟಿ, ತಿಪ್ಪಯ್ಯನ ಮಠದ ಬಗಲಾಗಿಂದ, ಊರ ಹೊರಗ ಹಳ್ಳದ ದಂಡೀ ಮ್ಯಾಗ, ಯೀರಬದ್ರ ದೇವರ ಗುಡಿಗೆ ಬಂದ ಮುಟ್ಟಿದರು. ಸಣ್ಣೀರಿ ಅಣ್ಣನ ಮಗನ ಮದುವೆ ಕಾರೇ ಅಲ್ಲೇ ನಡ್ಯೂದಿತ್ತು ಮತ್ತು ಅದಕ್ಕಂತ ಪಾಪ ಸಣ್ಣೀರಿ ಬಾಶಿಂಗ ತಗೊಂಡು ಓಡ್ಯೋಡಿ ಓಡ್ಯೋಡಿ ಬಂದ್ಲು.

**(18 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 06 ಪ್ರಶ್ನೆಗಳಿಗೆ (01) ಒಂದು ಪುಟಕ್ಕೆ ಮೀರದಂತೆ ಉತ್ತರಿಸಿರಿ)** **(6 × 5 = 30)**

18. ಕೆಳಗೆ ನೀಡಿರುವ ಬಸವಣ್ಣನವರ ವಚನದ ಆಶಯವನ್ನು ಬರೆಯಿರಿ.

    ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ ?
    ತನಗಾದ ಆಗೇನು ? ಅವರಿಗಾದ ಚೇಗೇನು ?
    ತನುವಿನ ಕೋಪ ತನ್ನ ಹಿರಿಯತನದ ಕೇಡು
    ಮನದ ಕೋಪ ತನ್ನ ಅರಿವಿನ ಕೇಡು
    ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
    ನೆರೆಮನೆಯ ಸುಡದು ಕೂಡಲ ಸಂಗಮದೇವ !

19. ಡಂಭಾಚಾರದ ಮೂಲಕ ತಾವು ದೊಡ್ಡ ಭಕ್ತರೆಂದು ಬಿಂಬಿಸುತ್ತಾ ಜನರನ್ನು ಮೋಸಗೊಳಿಸುವ ಹುಸಿಭಕ್ತರನ್ನು 'ಬೇವು ಬೆಲ್ಲದೊಳಿಡಲೇನು ಫಲ' ಕೀರ್ತನೆಯಲ್ಲಿ ಹೇಗೆ ವಿಡಂಬಿಸಲಾಗಿದೆ ? ವಿವರಿಸಿರಿ.

20. ನಿಮ್ಮೂರಿನ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಒದಗಿಸುವಂತೆ ಆಗ್ರಹಿಸಿ ಗ್ರಾಮ ಪಂಚಾಯತು ಅಧ್ಯಕ್ಷರಿಗೆ ಸಮರ್ಪಿಸಲು ಮನವಿ ಪತ್ರವನ್ನು ತಯಾರಿಸಿರಿ.

21. ಪಂಜರದ ರಹಸ್ಯವನ್ನು ಭೇದಿಸುವಲ್ಲಿ ಚಂದ್ರಗುಪ್ತನು ತೋರಿದ ಜಾಣ್ಮೆ, ಸಾಹಸಗಳನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

22. ಸಮಾಜ ಎಷ್ಟೇ ಮುಂದುವರೆದರೂ ವರದಕ್ಷಿಣೆಗಾಗಿ ಕಿರುಕುಳ ನೀಡುವ ವರದಿಗಳು ದಿನನಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ವರದಕ್ಷಿಣೆ ಸ್ವೀಕಾರದ ವಿರುದ್ಧ ಜನಜಾಗೃತಿ ಮೂಡಿಸುವ ಸಂಪಾದಕೀಯ ಲೇಖನವನ್ನು ಸಿದ್ಧಪಡಿಸಿರಿ.

23. ಬೆಳಗಿನ ಜಾವದ ಮಹತ್ವ ಮತ್ತು ವಿದ್ಯಾರ್ಥಿಗಳ ಸೋಮಾರಿತನದ ಸ್ವಾರಸ್ಯಕರ ಅಂಶಗಳು 'ಏಳಯ್ಯ ಬೆಳಗಾಯಿತು' ಪಾಠದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿಕೊಂಡು ಕಿರು ಲೇಖನವನ್ನು ತಯಾರಿಸಿರಿ.

24. ಯಾಂತ್ರಿಕ ಜೀವನಕ್ಕೆ ಮಾರುಹೋದ ಯುವ ಸಮೂಹ ಪಾರಂಪರಿಕ ಮೌಲ್ಯಗಳನ್ನು ಅರ್ಥೈಸದೆ ಜೀವಿಸುವ ರೀತಿ 'ಬೆಳಸು' ಕವನದಲ್ಲಿ ಮೂಡಿ ಬಂದ ಬಗೆಯನ್ನು ವಿವರಿಸಿರಿ.

25. ನೀರಿಗಾಗಿ ಪರಿತಪಿಸುವ ಜನರ ಪಾಡನ್ನು 'ಬರಿಗೊಡಗಳಿಗೆ ಸಮಾಧಾನ' ಕವಿತೆ ಹೇಗೆ ಪ್ರತಿಧ್ವನಿಸಿದೆ ? ವಿವರಿಸಿರಿ.

**(26 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ (02) ಎರಡು ಪ್ರಶ್ನೆಗಳಿಗೆ (1½) ಒಂದೂವರೆ ಪುಟಗಳಿಗೆ ಮೀರದಂತೆ ಉತ್ತರಿಸಿರಿ)** **$(2 \times 8 = 16)$**

26. ತವರು ಮತ್ತು ಆಶ್ರಮದ ಬಗೆಗೆ ಶಕುಂತಲೆಗೆ ಇರುವ ಆರ್ದ್ರವಾದ ಅನುಭವವನ್ನು 'ಹೇಮಕೂಟದಿಂದ ಬಂದ ಮೇಲೆ' ಕಥೆಯ ಹಿನ್ನೆಲೆಯಲ್ಲಿ ಸಂಗ್ರಹಿಸಿ ಬರೆಯಿರಿ.

27. 'ಹಸು ಪುಣ್ಯಕೋಟಿ ಮತ್ತು ಹುಲಿ ಅರ್ಭುತ ಕತೆ' ಯ ಮೂಲಕ ಪ್ರಾಮಾಣಿಕತೆಯ ಮಹತ್ವವನ್ನು ತಿಳಿದಿರುವಿರಿ. 'ಪ್ರಾಮಾಣಿಕತೆಗೆ ಎಂಥಹ ಕಠಿಣ ಹೃದಯವೂ ಕರಗುವುದು' ಎಂಬ ಮಾತನ್ನು ಸಮರ್ಥಿಸಿಕೊಂಡು, ಈ ಪಾಠಭಾಗದ ಹಿನ್ನೆಲೆಯಲ್ಲಿ ಪ್ರಬಂಧವೊಂದನ್ನು ಬರೆಯಿರಿ.

28. 'ಪೆಂಟಯ್ಯನ ಅಂಗಿ' ಮತ್ತು 'ಪೆಟ್ರೋಮ್ಯಾಕ್ಸ್ ಹೊತ್ತವರು' ಕವನಗಳಲ್ಲಿ ವ್ಯಕ್ತವಾಗಿರುವ ಬಡವರ ಸ್ಥಿತಿಗತಿಯನ್ನು ಪರಸ್ಪರ ಹೋಲಿಸಿ ಲೇಖನವೊಂದನ್ನು ಸಿದ್ಧಪಡಿಸಿರಿ.

---